ಮಕ್ಕಳಿಗೆ ಬಾಲ್ಯದಲ್ಲೇ ಬುದ್ಧಿ ಕಲಿಸಬೇಕು

✍️ಶ್ರೀವಲ್ಲಿ ರೈ ಮಾರ್ಟೆಲ್



ಒಬ್ಬ ತಂದೆಗೆ ತನ್ನ ಮಗನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಪೇಟೆಗೆ ಹೋಗುವ ಅಭ್ಯಾಸವಿತ್ತು. ಮಗನಿಗೂ ನಡೆಯುವುದು ಎಂದರೆ ಸೋಮಾರಿತನ. ಹಾಗಾಗಿ ತಂದೆಯ ಹೆಗಲ ಮೇಲೆ ಕುಳಿತುಕೊಂಡು, ಕೊಬ್ಬಿನಿಂದ ಮೆರೆಯುತ್ತಾ, ಕೈಯಲ್ಲಿ ಒಂದು ಕೋಲು ಹಿಡಿದು ದಾರಿಯಲ್ಲಿರುವ ಮರಗಿಡಗಳಿಗೆ ಹೊಡೆಯುತ್ತಾ, ಗಲಾಟೆ ಮಾಡುತ್ತಾ ಹೋಗುತ್ತಿದ್ದ.

ಒಮ್ಮೆ ಹೀಗೆಯೇ ಹೋಗುತ್ತಿರುವಾಗ, ಎದುರಿನಿಂದ ಒಬ್ಬ ವಯಸ್ಸಾದ ಮಡಕೆ ವ್ಯಾಪಾರಿ ಬುಟ್ಟಿ ತುಂಬಾ ಮಡಕೆಗಳನ್ನು ಹೊತ್ತು ಸಂತೆಗೆ ಹೋಗುತ್ತಿದ್ದ. ಹೆಗಲ ಮೇಲೆ ಕುಳಿತಿದ್ದ ಹುಡುಗನಿಗೆ ತಮಾಷೆ ಮಾಡುವ ಮನಸ್ಸಾಯಿತು. ಕೈಯಲ್ಲಿದ್ದ ಕೋಲಿನಿಂದ ಆ ವ್ಯಾಪಾರಿಯ ಮಡಕೆಗಳ ಬುಟ್ಟಿಗೆ ಜೋರಾಗಿ ಹೊಡೆದ. ಪರಿಣಾಮವಾಗಿ ಮೂರು-ನಾಲ್ಕು ಮಡಕೆಗಳು ಒಡೆದುಹೋದವು.

ವಯಸ್ಸಾದ ಆ ಮಡಕೆ ವ್ಯಾಪಾರಿಗೆ ಅವರೊಂದಿಗೆ ಜಗಳವಾಡುವಷ್ಟು ಶಕ್ತಿಯಿರಲಿಲ್ಲ. ಆದರೆ ಹುಡುಗನಿಗೆ ಬುದ್ಧಿ ಕಲಿಸಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿದ. ಜೇಬಿನಿಂದ ಹತ್ತು ರೂಪಾಯಿ ತೆಗೆದು ಹುಡುಗನ ಕೈಗೆ ಕೊಟ್ಟು, “ಬಹಳ ಒಳ್ಳೆಯ ಕೆಲಸ ಮಾಡಿದೆ! ತಗೋ, ನನ್ನ ಕಡೆಯಿಂದ ನಿನಗೆ ಉಡುಗೊರೆ,” ಎಂದನು.

ಹುಡುಗನಿಗೆ ತುಂಬಾ ಸಂತೋಷವಾಯಿತು. ಮಡಕೆ ಒಡೆದಿದ್ದಕ್ಕೆ ಹಣ ಸಿಕ್ಕಿದೆ ಎಂದುಕೊಂಡು, ಅದನ್ನೇ ಒಂದು ಒಳ್ಳೆಯ ಕೆಲಸವೆಂದು ಭಾವಿಸಿಕೊಂಡ.

ಕೆಲವು ದಿನಗಳ ನಂತರ, ಮತ್ತೊಮ್ಮೆ ತಂದೆಯ ಹೆಗಲ ಮೇಲೆ ಕುಳಿತು ಹೋಗುತ್ತಿದ್ದಾಗ, ಒಬ್ಬ ಗಟ್ಟಿಮುಟ್ಟಾದ ಯುವಕ ಮಡಕೆಗಳ ಬುಟ್ಟಿಯನ್ನು ಹೊತ್ತುಕೊಂಡು ಹೋಗುತ್ತಿರುವುದು ಕಾಣಿಸಿತು. ಹಿಂದಿನ ಘಟನೆ ನೆನಪಿಗೆ ಬಂದ ಹುಡುಗ, “ಇವನ ಮಡಕೆಗಳನ್ನೂ ಒಡೆದರೆ ನನಗೂ ಮತ್ತೆ ಹಣ ಸಿಗಬಹುದು,” ಎಂದುಕೊಂಡ.

ಅಷ್ಟೇ ತಡ. ಕೋಲಿನಿಂದ ಯುವಕನ ಮಡಕೆಗಳ ಬುಟ್ಟಿಗೆ ಬಲವಾಗಿ ಹೊಡೆದ. ಈ ಬಾರಿ ಪರಿಸ್ಥಿತಿ ಬೇರೆಯಾಗಿತ್ತು! ಯುವಕನಿಗೆ ಭಾರಿ ಸಿಟ್ಟು ಬಂತು. ತಕ್ಷಣ ಮಡಕೆಗಳ ಬುಟ್ಟಿಯನ್ನು ಕೆಳಗಿಟ್ಟು, ಹುಡುಗನನ್ನು ತಂದೆಯ ಹೆಗಲಿನಿಂದ ಕೆಳಗೆ ಎಳೆದು, ನಾಲ್ಕು ಏಟು ಬಿಗಿದ. ನಂತರ ತಂದೆಯ ಕಡೆ ತಿರುಗಿ,
“ನಿನ್ನ ಮಗನಿಗೆ ಬುದ್ಧಿ ಹೇಳಲು ನಿನಗೆ ಇನ್ನೂ ಸಮಯ ಸಿಕ್ಕಿಲ್ಲವೇ?”
ಎಂದು ಹೇಳಿ, ತಂದೆಗೂ ಎರಡು ಏಟು ಕೊಟ್ಟ.

ನೀತಿ:

ಮಕ್ಕಳಿಗೆ ನಾವು ಸಮಯಕ್ಕೆ ಸರಿಯಾಗಿ ಬುದ್ಧಿ ಹೇಳದಿದ್ದರೆ, ಜೀವನವೇ ಅವರಿಗೆ ಕಠಿಣ ರೀತಿಯಲ್ಲಿ ಬುದ್ಧಿ ಕಲಿಸುತ್ತದೆ.

ಮಕ್ಕಳ ತಪ್ಪುಗಳನ್ನು ಪ್ರೀತಿಯ ಹೆಸರಿನಲ್ಲಿ ಸಮರ್ಥಿಸುವುದಕ್ಕಿಂತ, ಬಾಲ್ಯದಲ್ಲಿಯೇ ಒಳ್ಳೆಯದು ಕೆಟ್ಟದ್ದು, ಸರಿಯೇ ತಪ್ಪೇ ಎಂಬುದನ್ನು ತಿಳಿಸಿ ಬೆಳೆಸುವುದು ಪೋಷಕರ ಜವಾಬ್ದಾರಿ. ಇಂದು ನಾವು ಕಲಿಸುವ ಸಣ್ಣ ಪಾಠವೇ ನಾಳೆ ಅವರ ಜೀವನವನ್ನು ಸರಿಯಾದ ದಾರಿಯಲ್ಲಿ ನಡೆಸಬಹುದು.